# ಕಾವ್ಯ ಕುರಿತ ಕವಿಗಳ ಜಿಜ್ಞಾಸೆಗಳು

**ಜೆ. ರಾಜ ಗುಂಡಾಪುರ**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮದರ್ಜೆ ಕಾಲೇಜು
ರಾಮನಗರ.

**Article Link: https://aksharasurya.com/2024/01/j-raja-gundapura-2/**

## ABSTRACT:

ಲೋಕಾನುಭವ ಮತ್ತು ಕಾವ್ಯಾನುಭವ ಅಥವಾ ಕಲಾನುಭವ ಭಿನ್ನವಾದವು. ಕಲಾ ಮಾಧ್ಯಮಗಳು ಬೇರೆ ಬೇರೆಯಾದರೂ ಅವುಗಳಿಂದ ಉಂಟಾಗುವ ಪರಿಣಾಮ ಮಾತ್ರ ಒಂದೇ ಆಗಿರುತ್ತದೆ. ಅದು ಆನಂದಾನುಭವ. ಚಿತ್ರ, ಸಂಗೀತ, ನೃತ್ಯ, ಸಾಹಿತ್ಯ ಈ ಎಲ್ಲಾ ಕಲಾನುಭವಗಳು ನೀಡುವ ಪರಿಣಾಮವೇ ಆನಂದಾನುಭವ. ಈ ಕಲಾನುಭವಕ್ಕೆ ಕಲಾಭಿವ್ಯಕ್ತಿಗೆ ಮೂಲ ದ್ರವ್ಯವೇ ಲೋಕಾನುಭವ.

ಕಲಾ ಮಾಧ್ಯಮಗಳಲ್ಲಿ ಶಾಬ್ದಿಕ ಮಾಧ್ಯಮವಾದ ಕಾವ್ಯ ಪ್ರಕಾರಕ್ಕೆ ಬಹಳ ಪ್ರಾಚೀನ ಇತಿಹಾಸವಿದೆ. ಹಾಗೆಯೇ ಕಾವ್ಯವನ್ನು ಕುರಿತ ಚರ್ಚೆ, ಜಿಜ್ಞಾಸೆಗೂ ಅಷ್ಟೇ ಪ್ರಾಚೀನತೆಯಿರುವುದನ್ನು ನಾವು ಕಾಣಬಹುದು. ಕಾವ್ಯದ ಸ್ವರೂಪ, ಕಾವ್ಯದ ಕಾರಣ, ಪರಿಣಾಮ, ಪ್ರಯೋಜನಗಳ ಕುರಿತ ಚರ್ಚೆಯು ಕಾವ್ಯ ಮೀಮಾಂಸೆ ಎಂಬ ಹೆಸರಿನಿಂದ ಪ್ರಚಲಿತವಾಗಿದೆ. ಕಾವ್ಯ ಕಾರಣ ಸಂಬಂಧದ ಚರ್ಚೆಯೇ ಕಾವ್ಯ ಮೀಮಾಂಸೆ. ಇದನ್ನು ಅನೇಕ ವಿದ್ವಾಂಸರು, ಪಂಡಿತರು, ಕವಿಗಳು ನಡೆಸುತ್ತಾ ಬಂದಿದ್ದು ಅನೇಕ ಕಾವ್ಯಮೀಮಂಸಾ ಕೃತಿಗಳ ರಚನೆಯಾಗಿರುವುದನ್ನು ಗಮನಿಸಬಹುದು.

## KEY WORDS:

ವಿಭಾವಾನುಭವ, ವ್ಯಭಿಚಾರಿ, ಗುಣದೋಷ, ದೀಪಕ, ಜೀಜ್ಞಾಸೆ, ಕಾವ್ಯದರ್ಶನ, ಲಘುಮಾ ಕೌಶಲ, ನಿಚ್ಚಂ ಹೊಸತು, ಸತ್ಯ ಶೋಧನೆ, ಸೌಂದರ್ಯ ಸಮೀಕ್ಷೆ.

ಕಾವ್ಯವನ್ನು ಕುರಿತ ಚರ್ಚೆ ಅಥವಾ ಚಿಂತನೆಯೇ ಕಾವ್ಯ ಮೀಮಾಂಸೆ. ಈ ಪದವನ್ನು ಇಂಗ್ಲೀಷ್‌ನ 'Poetics' ಎಂಬ ಪದಕ್ಕೆ ಸಂವಾದಿಯಾಗಿ ಬಳಸುತ್ತಿದ್ದೇವೆ. ಕವಿ ಎಂದರೆ ಯಾರು? ಕಾವ್ಯವೆಂದರೇನು? ಅದರ ಸ್ವರೂಪ,

ಲಕ್ಷಣಗಳಾವುವು? ಕಾವ್ಯದಿಂದ ಓದುಗರಿಗೆ ಲಭಿಸುವ ಪ್ರಯೋಜನಗಳಾವುವು? ಕಾವ್ಯ ಸೃಷ್ಟಿಯ ಪರಿಕರಗಳಾವುವು? ಅಲಂಕಾರ, ರೀತಿ, ರಸ, ಧ್ವನಿ, ವಕ್ರೋಕ್ತಿ, ಗುಣದೋಷ, ಔಚಿತ್ಯವೇ ಮುಂತಾದ ಕಾವ್ಯ ಸೃಷ್ಟಿಗೆ ಸಂಬಂಧಿಸಿದ ಸಮಸ್ತ ವಿಷಯಗಳನ್ನು ಚರ್ಚಿಸುವಂಥದ್ದು ಕಾವ್ಯ ಮೀಮಾಂಸೆ. ಕಾವ್ಯದ ಗುಣ, ದೋಷ, ಅಲಂಕಾರ–ಈ ಮೂರರ ವಿವೇಚನೆಯೇ ಪ್ರಾಚೀನ ಅಲಂಕಾರಗ್ರಂಥಗಳ ಮುಖ್ಯ ವಿಷಯ. "ರಸತ್ತತ್ವವೇ ಭಾತೀಯ ಕಾವ್ಯ ಮೀಮಾಂಸೆಯ ಒಳತಿರುಳು"[1] ಎಂದು ತೀ. ನಂ. ಶ್ರೀಕಂಠಯ್ಯನವರು ಗುರುತಿಸಿದ್ದಾರೆ. ಕಾವ್ಯಕ್ಕೆ ಸಂಬಂಧಿಸಿದ ಚರ್ಚೆ ಮೊದಲಿಗೆ ಕಂಡುಬರುವುದು ಭರತನ ನಾಟ್ಯಶಾಸ್ತ್ರ ಕೃತಿಯಲ್ಲಿ, ಕಾವ್ಯೇಘ ನಾಟಕಂ ರಮ್ಯಂ ಎಂಬಂತೆ, ಕಾವ್ಯಗಳಲ್ಲಿ ನಾಟಕವೇ ರಮ್ಯವಾದ್ದದು ಎಂದು ತಿಳಿದಿದ್ದ ಕಾಲವೊಂದಿತ್ತು. ಭರತನ ನಾಟ್ಯಶಾಸ್ತ್ರವು ನಾಟಕದ ಲಕ್ಷಣ ಸ್ವರೂಪಾದಿಗಳನ್ನು ಕುರಿತು ಚರ್ಚಿಸಿದೆ. ನಾಟಕವು ದೃಶ್ಯ ಕಾವ್ಯವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಭರತ ನೀಡಿರುವ ಸೂತ್ರ ತುಂಬಾ ಮಹತ್ವದ್ದಾಗಿದೆ. "ವಿಭಾವಾನುಭವ ವ್ಯಭಿಚಾರಿ ಸಂಯೋಗಾತ್ ರಸನಿಷ್ಪತಿಃ" ಭರತನ ಗ್ರಂಥದಲ್ಲಿ ಉಪಮಾ, ದೀಪಕ, ರೂಪಕ, ಯಮಕ ಈ ನಾಲ್ಕು ಅಲಂಕಾರಗಳ ಬಗ್ಗೆ ಪ್ರಸ್ತಾಪವಿದೆ.

"ಓದತಕ್ಕ ಅಥವಾ ಕೇಳತಕ್ಕ ಸಾಮಾನ್ಯ ಕಾವ್ಯ, ಅಭಿನಯಿಸಿ ನೋಡತಕ್ಕ ನಾಟಕ ಇವೆರಡನ್ನೂ 'ಕಾವ್ಯ' ಎಂಬ ಶಬ್ದವು ಒಳಗೊಳ್ಳುತ್ತದೆ. ದೃಶ್ಯ ಕಾವ್ಯ ಶ್ರವ್ಯಕಾವ್ಯಗಳೆರಡಕ್ಕೂ ತಿರುಳು ಒಂದೇ. ನಾಟಕದಲ್ಲಿ ಮೊದಲಿನಿಂದಲೂ ರಸಕ್ಕೆ ದೊರೆತಿರುವ ಪ್ರಾಶಸ್ತವು ಎಲ್ಲಾ ಬಗೆಯ ಸಾಹಿತ್ಯಕ್ಕೂ ಅನ್ವಯಿಸತಕ್ಕದ್ದು"[2] ಎಂದು ತೀ. ನಂ. ಶ್ರೀಕಂಠಯ್ಯನವರು ಹೇಳಿದ್ದಾರೆ.

ಲೇಖನ ಭಾಷಣಾಧಿಗಳ ರೂಪರಚನೆಗಳನ್ನು ಉಕ್ತಿ ಚಮತ್ಕಾರವನ್ನು ವಿಭಜನೆ ಮಾಡುವ ಅಲಂಕಾರಶಾಸ್ತ್ರ, ಕಾವ್ಯದ ತಿರುಳನ್ನು ಅದರ ನಿರ್ಮಾಣ ಕ್ರಮವೇ ಮೊದಲಾದವನ್ನು ನಿರೂಪಿಸುವ ಕಾವ್ಯ ಮೀಮಾಂಸೆ, ಎಲ್ಲ ಲಲಿತಕಲೆಗಳಿಗೂ ಸಮಾನ ವಿಷಯವಾಗಿರುವುದು ಮಾತ್ರವಲ್ಲದೆ ಬ್ರಹ್ಮಸೃಷ್ಟಿಯಲ್ಲೂ ಕಂಡು ಬರುವ ಸೌಂದರ್ಯದ ಸ್ವರೂಪವನ್ನು ವಿಚಾರಮಾಡುವ ಸೌಂದರ್ಯ ಮೀಮಾಂಸೆ. ಹೀಗೆ ಮೂರು ಶಾಸ್ತ್ರಗಳು ಪಾಶ್ಚಾತ್ಯರಲ್ಲಿ ಬಲುಮಟ್ಟಿಗೆ ಪ್ರತ್ಯೇಕವಾಗಿ ಬೆಳೆದಿವೆ.[3]

ಆರಂಭದಲ್ಲಿ ಅಲಂಕಾರಶಾಸ್ತ್ರವಾಗಿದ್ದದ್ದೇ ಬರುಬರುತ್ತಾ ಮತ್ತಷ್ಟು ವಿಸ್ತಾರ ಪಡೆದುಕೊಂಡು ಕಾವ್ಯ ಮೀಮಾಂಸೆಯಾಗಿ ಪರಿಣಮಿಸಿತು. ಅಲಂಕಾರ ಎಂಬುದು ಅನುಪ್ರಾಸ, ಉಪಮೆ, ರೂಪಕ, ದೀಪಕ ಮೊದಲಾದ ಶಬ್ದಾರ್ಥ ವೈಚಿತ್ರಗಳನ್ನು ಅಲಂಕಾರವೆಂದು ಕರೆದಿರುವುದು ಸೀಮಿತವಾದ ಅರ್ಥದಲ್ಲಿ ಅಲಂಕಾರವನ್ನು

‘ಕಾವ್ಯದಲ್ಲಿರುವ ಸೌಂದರ್ಯ’ ಎಂಬ ಹಿನ್ನಲೆಯಲ್ಲಿ ಬಳಕೆಯಾಗತೊಡಗಿದ್ದು ಅದರ ವ್ಯಾಪಕವಾದ ಅರ್ಥದಲ್ಲಿ.

ವಾಮನರು “ಕಾವ್ಯಂ ಗ್ರಾಹ್ಯಮಲಂಕಾರಾತ್” ಅಂದರೆ ಕಾವ್ಯದಲ್ಲಿ ಅಲಂಕಾರವಿದ್ದರೆ, ಅಲಂಕಾರದಿಂದ ರಚಿತವಾಗಿದ್ದರೆ ಅದು ಸ್ವೀಕಾರಾರ್ಹವಾಗುತ್ತದೆ ಎಂದಿದ್ದಾನೆ. “ಸೌಂದರ್ಯಮಲಂಕಾರಃ”–ಸೌಂದರ್ಯವೇ ಅಲಂಕಾರ ಎಂದೂ ಹೇಳಿದ್ದಾನೆ.[4] ಕಾವ್ಯ ಮೀಮಾಂಸಾ ಶಾಸ್ತ್ರವು ಕ್ರಿ.ಶ. ಒಂದನೇ ಶತಮಾನದಷ್ಟು ಹಳೆಯದೆಂದೂ ಆ ಕಾಲಕ್ಕೆ ಈ ಶಾಸ್ತ್ರವನ್ನು ‘ಕ್ರಿಯಾಕಲ್ಪ’ ಎಂಬ ಹೆಸರಿನಿಂದ ಕರೆಯಲಾಗುತ್ತೆಂದು ತೀ. ನಂ. ಶ್ರೀಕಂಠಯ್ಯ ಹೇಳಿದ್ದಾರೆ.[5]

ರಾಜಶೇಖರನೇ ಮೊದಲಿಗೆ ‘ಕಾವ್ಯ ಮೀಮಾಂಸಾ’ ಎಂಬ ಹೆಸರನ್ನು ಬಳಸಿದವನು. ಭರತನ ನಂತರ ಗಮನ ಸೆಳೆಯುವ ಲಾಕ್ಷಣಿಕರೆಂದರೆ ಬಾಮಹ ಮತ್ತು ದಂಡಿ. ‘ಕಾವ್ಯಲಂಕಾರ’ ಎಂಬುದು ಭಾಮಹನ ಕೃತಿ. ಅಲಂಕಾರಗಳ ನಿರೂಪಣೆಯೇ ಈ ಗ್ರಂಥದ ಮುಖ್ಯ ವಿಷಯ. “ವಕ್ರೋಕ್ತಿಯಿಲ್ಲದೆ ಅಲಂಕಾರವಿಲ್ಲ, ಕಾವ್ಯದ ಶಬ್ದದಲ್ಲಿಯೂ, ಅರ್ಥದಲ್ಲಿಯೂ ಲೋಕರೂಢಿಗೆ ಮೀರಿದ ಒಂದು ಅತಿಶಯವಿರುವುದೇ ಅತಿಶಯೋಕ್ತಿ ಅಥವಾ ವಕ್ರೋಕಿ”. ವಕ್ರೋಕ್ತಿಯೆ ಕಾವ್ಯಕ್ಕೆ ಸೌಂದರ್ಯ ತರುವುದು. ಇದನ್ನು ತರುವುದಕ್ಕೆ ಕವಿ ಪ್ರಯತ್ನಿಸಬೇಕೆನ್ನುತ್ತಾನೆ. “ಶಬ್ದಾರ್ಥಾಸಹಿತೌ ಕಾವ್ಯಂ” ಭಾಮಹನ ಪ್ರಸಿದ್ಧ ಉಕ್ತಿ. “ಶರೀರಂ ತವಿದಿಷ್ಟಾರ್ಥ ವ್ಯವಚ್ಛಿನ್ನಾ ಪದಾವಲೀ” ಎಂಬುದು ದಂಡಿಯ ಕಾವ್ಯರ್ದಶನದ ಸೂಕ್ತಿ. ಕಾವ್ಯವು ಅಲಂಕಾರಗಳಿಂದ ಶೋಭಿರಬೇಕು, ಗುಣಗಳಿಂದ ಕೂಡಿದ್ದು ದೋಷಗಳಿಲ್ಲದೆ ಇರಬೇಕು. ದಶಗುಣಗಳೇ ಕಾವ್ಯದ ಆತ್ಮವೆಂದು ದಂಡಿಹೇಳುತ್ತಾನೆ.

“ರೀತಿರಾತ್ಮಾಕಾವ್ಯಸ್ಯ” ರೀತಿಯೇ ಕಾವ್ಯದ ಆತ್ಮ ಎಂದವನು ವಾಮನ. ಅಲಂಕಾರಗಳಿಂದ ಕಾವ್ಯ ಗುಣಗಳನ್ನು ಪಟ್ಟಿಮಾಡುತ್ತಾ ಕಾವ್ಯದ ರೀತಿಯೇ ಕಾವ್ಯದ ಆತ್ಮ ಎಂದು ಕಾವ್ಯ ಜಿಜ್ಞಾಸೆ ಬೆಳೆದು ಬಂದಿರುವುದನ್ನು ಕಾಣಬಹುದು. ಅದು ಅಲ್ಲಿಗೇ ನಿಲ್ಲದೆ ‘ಕಾವ್ಯಸ್ಯಾತ್ಮಧ್ವನಿ’ ಅಂದರೆ ಧ್ವನಿಯೇ ಕಾವ್ಯದ ಆತ್ಮವೆಂದು ಆನಂದವರ್ಧನ ಹೇಳಿ, ಕಾವ್ಯದಲ್ಲಿ ಪ್ರಧಾನವು, ಪರಮಾರ್ಥವೂ ಆಗಿ ನಿಲ್ಲುವ ವ್ಯಂಗ್ಯರ್ಥಕ್ಕೆ ‘ಧ್ವನಿ’ ಎಂದು ಕರೆದಿದ್ದಾರೆ.

ಶಬ್ದಕ್ಕೆ ವ್ಯಂಜನಾವೃತ್ತಿಯೆಂಬ ವ್ಯಾಪಾರವುಂಟೆಂದು ಇದು ಅಭಿಧಾವೃತ್ತಿ, ಲಕ್ಷಣವೃತ್ತಿಗಳಿಗಿಂತ ಭಿನ್ನವೆಂದೂ ವ್ಯವಸ್ಥೆಗೊಳಿಸಿ, ಕಾವ್ಯದಲ್ಲಿ ಸಾರಭೂತವಾದ ಅರ್ಥವೆಲ್ಲ ವ್ಯಂಗವಾಗಿರುವುದೇ ಹೊರತು ವಾಚ್ಯವಾಗಿರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದು ಧ್ವನಿ ಪ್ರಸ್ತಾನ ಕಾರರ ಕೊಡುಗೆ.

ಹೀಗೆ ಸಂಸ್ಕೃತ ಕಾವ್ಯ ಮೀಮಾಂಸಕಾರರು ಕಾವ್ಯವನ್ನು ಭರತನ ರಸ ಸೂತ್ರದಿಂದ ಹಿಡಿದು ಅಲಂಕಾರ ಗುಣ ರೀತಿ ಧ್ವನಿ ಮೊದಲಾಗಿ ಕಾವ್ಯದಲ್ಲಿರಬೇಕಾದ ಅನೇಕ ವಿಚಾರಗಳನ್ನು ಚರ್ಚಿಸಿ, ಕಾವ್ಯವೆಂದರೆ ಸೌಂದರ್ಯವನು ಅನುಭವ ನೀಡುವಂತಹದೆಂದು ಹೇಳಿದ್ದಾರೆ.

ಕನ್ನಡದ ಕವಿಗಳು, ಅಲಂಕಾರಿಕರು ಕಾವ್ಯವನ್ನು ಕುರಿತು ನಡೆಸಿರುವ ವಿಜ್ಞಾಸೆಯು ಮಹತ್ವದಾಗಿದೆ. ಶ್ರೀವಿಜಯನ 'ಕವಿರಾಜಮಾರ್ಗ' ಕೃತಿ ಕನ್ನಡದ ಮೊದಲ ಅಲಂಕಾರಿಕ ಗ್ರಂಥವಾಗಿದ್ದು ಇದಕ್ಕೆ ದಂಡಿಯ 'ಕಾವ್ಯದರ್ಶ' ಗ್ರಂಥ ಆಧಾರವಾಗಿದೆ. ಈ ಕೃತಿಯಲ್ಲಿ ಕವಿರಾಜಮಾರ್ಗಕಾರನು ಅಲಂಕಾರಗಳ ನಿರೂಪಣೆಗೆ ಹೆಚ್ಚಿನ ಮಹತ್ವ ನೀಡಿದ್ದಾರೆ ಅದರೊಟ್ಟಿಗೆ ಕನ್ನಡ ಭಾಷೆ, ಜನ, ಪ್ರದೇಶದ ಬಗ್ಗೆ ಮಹತ್ವದ ವಿಚಾರಗಳನ್ನು ತಿಳಿಸಿದ್ದಾರೆ. ಕನ್ನಡ ಭಾಷೆಯ ವಿಶಿಷ್ಟತೆ ಬಗ್ಗೆ ಇರುವ ಮೊದಲ ಕೃತಿ ಇದು. ಕನ್ನಡ ಕಾವ್ಯದ ಲಕ್ಷಣ ತಿಳಿಸುವ ಮೊದಲ ಕೃತಿ ಇದ್ದು. ಕಾವ್ಯದಲ್ಲಿ ದೋಷಾನುವರ್ಣನ ನಿರ್ಣಯವನ್ನು, ಶಬ್ದಾಲಂಕಾರ, ಅರ್ಥಲಂಕಾರ ನಿರ್ಣಯವನ್ನು ಹೀಗೆ ಮೂರು ಪರಿಚ್ಛೇದಗಳಲ್ಲಿ ಈ ಕೃತಿಯಿದೆ "ಕಾವೇರಿಯಿಂದ ಆ ಗೋದಾವರಿವರಂ ಇರ್ದ ನಾಡು" ಚೆತ್ತಾಣ ಬೆದಂಡೆ ಎಂಬ ಕಾವ್ಯ ಜಾತಿಗಳು ಕನ್ನಡದಲ್ಲಿದ್ದವೆಂದು, ಗದ್ಯ, ಪದ್ಯ ಸಮಿಶ್ರಿತ್ರ ಕಾವ್ಯ ಪ್ರಕಾರಗಳಿವೆ ಎಂದೂ ಕವಿರಾಜಮಾರ್ಗಕಾರ ಹೇಳಿದ್ದಾನೆ.

ನಂತರ ಎರಡನೇ ನಾಗವರ್ಮನ 'ಕಾವ್ಯಾವಲೋಕನ' ದೊರೆತಿರುವ ಪ್ರಮುಖ ಕೃತಿ, ಇವನನ್ನು 'ಕರ್ನಾಟಕದ ಲಕ್ಷಣ ಶಿಕ್ಷಾಚಾರ್ಯ' ಎಂದು ತೀ. ನಂ. ಶ್ರೀಕಂಠಯ್ಯ ಕರೆದಿದ್ದಾರೆ. ಈ ಕೃತಿಯಲ್ಲಿ ಕನ್ನಡ ವ್ಯಾಕರಣ, ಗುಣ, ವಿವೇಕ, ರೀತಿ, ಕ್ರಮ, ರಸ ನಿರೂಪಣೆ, ಕವಿ ಸಮಯ ಎಂಬ ಐದು ಅಧಿಕ ಕಾರಣಗಳಿವೆ. 'ರೀತಿ ಕಾವ್ಯದ ಶರೀರ ರಸ ಅದರ ಜೀವ' ಎಂದು ಎರಡನೇ ನಾಗವರ್ಮ ಕಾವ್ಯನನ್ನು ಕುರಿತು ಹೇಳಿದ್ದಾನೆ.

ಪ್ರತಿಭೆ, ವ್ಯೂತ್ಪತಿ, ಅಭ್ಯಾಸ ಬಲಗಳು ಕಾವ್ಯದ ಕಾರಣಗಳೆಂದು; ಅಲಂಕಾರ, ಗುಣ, ರೀತಿ, ರಸದ್ವನಿ ಕಾವ್ಯದಲ್ಲಿರಬೇಕಾದ ಜೀವಾಳಗಳೆಂದು ಪ್ರಾಚೀನ ಕನ್ನಡ ಕವಿಗಳು ನಂಬಿದ್ದರು.

ಕಾವ್ಯವನ್ನು ಕುರಿತು ಆದಿಮಹಾ ಕವಿ ಪಂಪನು "ಇದು ನಿಚ್ಚಂ ಹೊಸತು, ಆರ್ಣವಂಬೊಲತಿ ಗಂಭೀರಂ ಕವಿತಂ" ಅಂದರೆ ಕಾವ್ಯ ನಿತ್ಯ ನೂತನವಾದದ್ದು, ಸದಾ ಹೊಸತು, ಸಮುದ್ರದ ಉಪಮೆ ಕಾವ್ಯದ ಗಾಂಭೀರ್ಯ ಆಳ ವಿಶೇಷರ್ಥ, ಮಹತ್ವವನ್ನು ಸೂಚಿಸುವಂತೆ ಬಳಸಿ, ಸಮುದ್ರದಂತೆ ಗಂಭೀರವಾಗಿರಬೇಕಾಗಿದ್ದಾನೆ.

ಪಂಪ ತನ್ನನ್ನು ತಾನು “ಹಿತಮಿತ ಮೃದು ವಚನಂ” ಎಂದು ಹೇಳಿಕೊಳ್ಳುವ ಮಾತು ಕಾವ್ಯ ಹೇಗಿರಬೇಕೆಂದು ಸೂಚಿಸುತ್ತದೆ. “ಮೃದು ಮಧುರ ವಚನ ರಚನೆಯೊಳು ಉದಾತ್ತ ಅರ್ಥ ಪ್ರತೀತಿಯಂ” ಎಂದು ಪಂಪ ತನ್ನ ಆದಿಪುರಾಣದಲ್ಲಿ ಕಾವ್ಯವನ್ನು ಕುರಿತು ವ್ಯಾಖ್ಯಾನಿಸಿದ್ದಾನೆ. ಶಕ್ತಿ ಕವಿ ರನ್ನನ್ನು ‘ಗುಡಾರದ ಕವಿಯಂತಿರೆ ಮುಚ್ಚಿಹೋದ ಕವಿಯಂ ಕವಿಯೇ’ ಎಂದು ಶಬ್ದಾರ್ಥಗಳ ಸ್ಫುಟತ್ವವನ್ನು ಎತ್ತಿ ಹಿಡಿಯುತ್ತಾನೆ. ರನ್ನನ ದೃಷ್ಟಿಯಲ್ಲಿ ಕವಿಯ ಅಭಿವ್ಯಕ್ತಿ ಅರ್ಥ ವಂತಿಕೆಯಿಂದ ಕೂಡಿದ್ದು ಸರಳವಾಗಿರಬೇಕು.

ಸೋಮೇಶ್ವರ ಕವಿಯು ವ್ಯುತ್ಪತಿ ಹಾಗೂ ಪಾಂಡಿತ್ಯವನ್ನು ಗಳಿಸಿಕೊಳ್ಳುವ ಪರಿಯನ್ನು ಹೀಗೆ ಹೇಳಿದ್ದಾನೆ. “ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಗಳಂ ಕೇಳುತಂ, ಕೆಲವಂ ಮಾಳ್ವದರಿಂದ ಕಂಡು ಕೆಲವಂದು ಸಜ್ಜನ ಸಂಗದಿಂದ ಅರಿಯಲ್ ಸರ್ವಜ್ಞನಪ್ಪಂ ನರಂ”[6] ಎಂದಿದ್ದಾರೆ.

ಕವಿ ನೇಮಿಚಂದ್ರನು ‘ಕವಿಗೆ ಬೆಲೆಯು ಭುವನದ ಭಾಗ್ಯದಿಂದ ದೊರೆಯುತ್ತದೆಯೇ ಹೊರತು ಕೃತಿಯ ಬೆಲೆಯಿಂದಲ್ಲ’ ಎನ್ನುತ್ತಾನೆ. ‘ಆನು ಒಲಿದಂತೆ ಹಾಡುವೆ’ ಎನ್ನುವ ಮೂಲಕ ಕನ್ನಡ ಕಾವ್ಯ ಪರಂಪರೆಯಲ್ಲಿ ದೇಸಿ ಸಂಪ್ರದಾಯವನ್ನು, ಪ್ರಾದೇಶಿಕತೆಯನ್ನು ಎತ್ತಿ ಹಿಡಿದವರು ಶರಣರು. ಸಾಮಾಜಿಕ ಕ್ರಾಂತಿಯ ಫಲವಾಗಿಯೇ ಮೂಡಿದ ವಚನಗಳು, ಕನ್ನಡ ಕಾವ್ಯದ ಸ್ವರೂಪವನ್ನು ವಿಸ್ತರಿಸಿದ ಗೇಯಮವಾದ, ಗದ್ಯಮಯವಾದ ಕಾವ್ಯ ರಚನೆಗಳವು.

ನಡುಗನ್ನಡದ ಕವಿ ರಾಘವಾಂಕನು “ರಸವೇ ಜೀವ ಭಾವವೇ ಒಡಲು ಅರ್ಥವೇ ಅವಯವ ಶಬ್ದ ಸಂಮೋಹವೇ ನುಡಿ, ಅಲಂಕಾರವೇ ತೊಡೆಗೆ, ಸುಲಕ್ಷಣವೇ ಲಕ್ಷಣ, ದೋಷರಹಿತ ಪದವಿನ್ಯಾಸವೇ ನಡೆ, ರೀತಿಯಲ್ಲಿ ಸುಕುಮಾರತೆ, ರಸಿಕತನವೇ ಚಲನೆ, ಸುಖವೇ ನೆಲೆ ಆಗಿರುವುದೇ ಕಾವ್ಯವೆಂದು”[7] ಸಮಗ್ರವಾಗಿ ಕಾವ್ಯದ ಜಿಜ್ಞಾಸೆ ನಡೆಸಿದ್ದಾನೆ.

“ಕಾವ್ಯವೆಂಬುದು ಯೋಗ, ಅದು ಸಂಸಾರಿಯ ಯೋಗ, ಕಾವ್ಯ ಯೋಗವೆಂದರೆ ಕವಿಯ ಕರ್ಮ ಯೋಗ, ಎಲ್ಲಾ ಯುಗಗಳಂತೆ ಈ ಯೋಗದ ಗುರಿಯೂ ಮುಕ್ತಿ, ಆನಂದವೇ ಆಗಿದೆ ಎಂದು ಬೇಂದ್ರೆಯವರು ಕಾವ್ಯವನ್ನು ಕುರಿತು ಹೇಳಿದ್ದಾರೆ. ರಸಾನುಭವದೊಂದಿಗೆ ಹೃದಯವನ್ನು ಹಿಗ್ಗಿಸುವುದು ಕಾವ್ಯವೆನ್ನುತ್ತಾರೆ.”[8] ಸಾಹಿತ್ಯ ಕವಿಗಳಿಗಿಂತ ಭಕ್ತ ಕವಿಗಳ ಸತ್ವ ಹಿರಿದೆಂದೂ ವಚನಕಾರರ, ದಾಸರ ಶಕ್ತಿ ಹೆಚ್ಚಿನದೆಂದು ಮೆಚ್ಚಿದ್ದಾರೆ.

ಕಾವ್ಯದರ್ಶನದ ಮೂಲಕ ಕನ್ನಡ ಕಾವ್ಯ ಚಿಂತನೆ ನಡೆಸಿದವರು ಕುವೆಂಪು

"ದಾರ್ಶನಿಕ ಕಾವ್ಯ ಮೀಮಾಂಸೆ ಬರೆದವರು ಭವ್ಯನಾದ, ದಿವ್ಯವಾದ, ಅನುಭಾವದ ದರ್ಶನ ಮಾಡಿಸುವುದು ಕಾವ್ಯ, ಪ್ರತಿಮಾ ನಿಷ್ಠ, ಪೂರ್ಣ ದೃಷ್ಟಿ, ದರ್ಶನಧ್ವನಿ ಕಾವ್ಯದ ಜೀವಾಳ ವೆಂದಿದ್ದಾರೆ. ಕಾವ್ಯಾನುಭವವು ಆಲೋಕಿತವಾದದ್ದು, ಶ್ರೇಷ್ಠ ಕಾವ್ಯಾನುಭವವೆಂದರೆ ಭವ್ಯತಾನುಭವ ಎಂಬ ವಿಚಾರಗಳು ಕುವೆಂಪುರವರದು. ಜೀವನದ ಸುಖದುಃಖ ಸೃಷ್ಟಿಯ ಸೌಂದರ್ಯದ ರಹಸ್ಯ, ಸಮಸ್ತ ವಿಶ್ವದ ಹಿಂದಿರುವ ಮಹಾಪವಿತ್ರ ವ್ಯಕ್ತಿತ್ವದಲ್ಲಿ ನಮಗು ಉಂಟಾಗುವ ವೇದನಾಪೂರ್ವಕವಾದ ಪ್ರೇಮ, ಭಕ್ತಿ, ಇದೇ ಮೊದಲಾದ ದಿವ್ಯ ಭಾವಗಳು ಪ್ರತಿಭಾ ಸಂಪನ್ನನಾದ ಕವಿಯ ಎದೆಯಲ್ಲಿ ಉದ್ರೇಕವಾದಾಗ ಹಸುರು ನೆಲದಿಂದ ಉಕ್ಕಿ ನಗೆಯುವ ಬಗ್ಗೆಯಂತೆ ನಿರಂತರವಾಗಿ ನಿರಾಯಾಸವಾಗಿ ಚಿಮ್ಮಿ ಹೊಮ್ಮುವ ಭಾವನಾತ್ಮಕವಾದ ಲಲಿತ ಪದಗಳ ಮನೋಹರವಾದ ಇಂಪಾದ ನೃತ್ಯವೇ ಸುಗ್ಗಿಯ ಕುಣಿತವೇ ನಿಜವಾದ ಕವಿತೆ"[9] ಎನ್ನುವ ಮೂಲಕ ದಿವ್ಯ ಭಾವಗಳ ಬುಗ್ಗೆ ಮನೋಹರವಾದ ಪದಗಳ ಅಭಿವ್ಯಕ್ತಿ ಎನ್ನುತ್ತಾರೆ.

ಕಾವ್ಯದ ಚಿಂತನೆಯಲ್ಲಿ ತೊಡಗಿದ್ದ ಪು. ತಿ. ನರಸಿಂಹಚಾರ್ಯರು ಕಾವ್ಯವನ್ನು ಕುರಿತು 'ಭವಾನಿ ಮಜ್ಜನ ಚಾತುರ್ಯ, ಲಘಿಮಾ ಕೌಶಲ' ಎಂಬ ಪದಗಳನ್ನು ಬಳಸುತ್ತಾರೆ. ಸುತ್ತಲಿನ ಜಗತ್ತನ್ನು ತೀವ್ರವಾಗಿ ಸಂವೇದನೆಗೆ ಒಳಪಡಿಸಿಕೊಳ್ಳಬಲ್ಲ ಕುಶಲತೆಯೇ ಭವನಿ ಮಜ್ಜನ ಹಾಗೆ ಲೋಕಾನುಭವದಲ್ಲಿ ತೊಡಗಿದ್ದೂ ಥಟ್ಟನೆ ಅಲ್ಲಿಂದ ಹೊರ ಜಿಗಿತು, ದೂರ ನಿಂತು ಅದನ್ನು ವಿವ–ರಿಸಬಲ್ಲ ಕೌಶಲ್ಯ ಇವುಗಳನ್ನು ಕವಿ ಒಳಗೊಂಡಿದ್ದು ಕಾವ್ಯ ರಚಿಸುವಾಗ ಕಾವ್ಯದ ಜೀವಾಳ ವಸ್ತುವಿನನಲ್ಲಿದೆ.

ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು ಎಂದು ಕಾವ್ಯ ಶರಧಿಗೆ ಬಂಧನ ಬೇಡವೆಂದು ನವ್ಯ ಕಾವ್ಯ ಪ್ರಯೋಗ ಆರಂಭಿಸಿದ ವಿ. ಕೃ. ಗೋಕಾಕ್ ರವರು ಕಾವ್ಯವನ್ನು ಕುರಿತು 'ನಮ್ಮೊಳಗಿನ ಆಳವಾದ ಅಂತರ್ ದೃಷ್ಟಿಯೇ ಕಾವ್ಯದ ಆತ್ಮ, ವ್ಯಕ್ತಿನಿಷ್ಠವಾಗಿ ಅದು ನಿರೂಪಿತವಾಗಿದ್ದರೆ ಕಾವ್ಯವು ರೋಮ್ಯಾಂಟಿಕ್ ಮಾದರಿಯಾಗಿರುತ್ತದೆ. ವಸ್ತು ನಿರಾಭರಣವಾಗಿ ನೇರವಾಗಿ ವ್ಯಕ್ತವಾಗಿದ್ದರೆ ಕಾವ್ಯವು ನವ್ಯವಾಗುತ್ತದೆ' ಎಂದು ಕಾವ್ಯದ ಸ್ವರೂಪವನ್ನು ಕುರಿತು ಹೇಳಿದ್ದಾರೆ. ನಡೆದು ಬಂದ ದಾರಿ ಕಡೆಗೆ ತಿರುಗಿಸಬೇಡ ಕಣ್ಣ ಹೊರಳಿಸಬೇಡ ಎನ್ನುತ್ತಾ "ಅನ್ಯರೊರೆದುದನೆ, ಬರೆದುದನೆ ನಾ ಬರೆದು ವಿಭಿನ್ನವಾಗಿದೆ ಮನವು ಬಗೆಯೊಳಗನೇ ತೆರೆದು, ನನ್ನ ನುಡಿಯೊಡೆಳೆ ಬಣ್ಣ ಬಣ್ಣದಲ್ಲಿ ಬಣ್ಣಿಸುವ ಪನ್ನತಿಕೆ ಬರುವತನಕ ನನ್ನ ಬಾಳಿದು ನರಕ"[11] ಎಂದು ಗೋಪಾಲಕೃಷ್ಣ ಅಡಿಗರು ತನ್ನತನವನ್ನು, ಸ್ವಂತಿಕೆಯನ್ನು ಅಭಿವ್ಯಕ್ತಿಸುವುದೇ ಕಾವ್ಯ ಎಂದರೆ ವಸ್ತು ಮತ್ತು ಅಭಿವ್ಯಕ್ತಿ ಎರಡರಲ್ಲೂ ಹೊಸದನ್ನು

ಕಾಣುವ, ಕಟ್ಟುವ ಸಾಮರ್ಥ್ಯವೇ ಕಾವ್ಯದ ರಚನೆಗೆ ಬೇಕಾದ ಅಂಶವೆಂದರು.

ಕಾವ್ಯ ರಚನೆ ಬೇರೆಯಲ್ಲ, ಬದುಕು ಬೇರೆಯಲ್ಲ ಅವೆರಡು ಪರಸ್ಪರ ಪೂರಕ ಮತ್ತು ಪ್ರಚೋದಕ. ತಮ್ಮ ಜೀವನವೇ ತಮ್ಮ ಕಾವ್ಯವೆಂದು ಬದುಕಿ ಬರೆದವರು ಕೆ. ಎಸ್. ನರಸಿಂಹಸ್ವಾಮಿಯವರು ಕವಿತೆ ಎಂದರೆ ಬದುಕಿನ ಎಲ್ಲಾ ರೀತಿಯ ಅನುಭವದ ಪರಿಣಾಮ ಅದರಲ್ಲಿ ಒಲವಿಗೆ, ಚೆಲುವಿಗೆ ಮೊದಲ ಸ್ಥಾನ. ಬದುಕು ನೋವು–ನಲಿವಿನ ಹೂರಣ ಎನ್ನುವ ನರಸಿಂಹ ಸ್ವಾಮಿಗಳು "ಋತುಗತಿಯಿಲ್ಲಿ ಶೈಲಿ ಮತಿಯಿಲ್ಲ ಶಬ್ದ ರತಿಯಲ್ಲಿ ನನ್ನ ಕವಿತೆ, ಪದ ಪದಕವಿಲ್ಲ, ತಲೆಭಾರವಿಲ್ಲ, ನಿಮ್ಮುಸಿರು ನನ್ನ ಕವಿತೆ ಅಲಂಕಾರವಿಲ್ಲ. ನಿಜಾಕಾರನನ್ನು ಕವಿತೆ ನನ್ನಸೆಗಣ್ಣ ಬಂದವರಿಗೆ ಬಂದ ಶರಸ್ನಾಕೆ ನನ್ನ ಕವಿತೆ"[12] ಎಂದು ಅವರ ಕಾವ್ಯದ ಸ್ವರೂಪವನ್ನು ಕುರಿತು ಅವರೇ ಕಾವ್ಯದ ಮೂಲಕ ಹೇಳಿದ್ದಾರೆ. 'ಆಳದನುಭವವನ್ನು ಮಾತು ಕೈ ಹಿಡಿದಾಗ ಕಾವು ಬೆಳಗಾದಾಗ ಒಂದು ಕವನ' ಎಂದು ಹೇಳಿದ್ದಾರೆ.

'ಪ್ರೀತಿಯಿಲ್ಲದ ಮೇಲೆ ಮೋಡ ಕಟ್ಟಿತು ಹೇಗೆ? ಮಳೆ ಸುರಿದೀತು ಹೇಗೆ? ಹೂವು ಅರಳಿತು ಹೇಗೆ?' ಎನ್ನುತ ಕಾವ್ಯದ ಜೀವಾಳವೇ ಪ್ರೀತಿ ಎಂದ ಕವಿ ಜಿ. ಎಸ್. ಶಿವರುದ್ರಪ್ಪನವರು ಲೋಕದ ಚಲನೆಗೆ ಪ್ರೀತಿ ಕಾರಣ. ಬದುಕಿನ ಪ್ರೀತಿಯೇ ಕಾವ್ಯ ರಚನೆಗೆ ಪ್ರೇರಣೆ ಎಂದವರು ಅವರು. "ಹಾಡು ಹಳೆಯದಾದರೇನು ಭಾವ ನವ ನವೀನ ಎದೆಯ ಭಾವ ಹೊಮ್ಮುವುದಕ್ಕೆ ಭಾಷೆ ಒಂದು ಸಾಧನ"[13], "ಸ್ಫೂರ್ತಿಯ ಕರು ಬಾಯಿಕ್ಕಲು ಪ್ರತಿಭೆಯ ಕೆಚ್ಚಲಿಗೆ, ಶಬ್ದಾರ್ಥದ ಹಾಲಿಳಿವುದು ಕವಿಪಾತ್ರ ಒಳಗೆ"[14] ಎನ್ನುತ್ತಾ ಜಿಜ್ಞಾಸೆ ನಡೆಸಿದರು ಶಿವರುದ್ರಪ್ಪನವರು ಕಾವ್ಯ ಜೀವನದ ಪ್ರತಿಬಿಂಬ ಮಾತ್ರವಲ್ಲ ಗತಿಬಿಂಬ ಎನ್ನುತ್ತಲೇ ಕಾವ್ಯ ಸೌಂದರ್ಯ ಸಮೀಕ್ಷೆ ನಡೆಸಿದವರು ಶಿವರುದ್ರಪ್ಪನವರು.

'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ'ನೆಂಬ ಘೋಷಣೆಯ ಮೂಲಕ ಕಾವ್ಯವನ್ನು ಸಾಮಾಜಿಕ ಅಸ್ತ್ರವನ್ನಾಗಿ ಕಂಡವರು ದಲಿತ, ಬಂಡಾಯದ ಕವಿಗಳು. "ಶೋಷಣೆಯ ವಿರುದ್ಧದ ದನಿ ಕಾವ್ಯವಾಗಬೇಕು, ಹೋರಾಟದ ಖಡ್ಗವಾಗಬೇಕು ಲೇಖನಿ, ಸ್ವಾತಂತ್ರ್ಯ, ಸಮಾನತೆ ಮತ್ತು ಮಾನವೀಯ ಮೌಲ್ಯಗಳ ನೆಲೆಯಲ್ಲಿ ನಿಂತು ಸಮಾಜದ ಬದಲಾವಣೆಯನ್ನು ಬಯಸಿದ ದಲಿತ, ಬಂಡಾಯದ ಚಳುವಳಿಯ ಪ್ರತೀಕವಾಗಿ ರಚಿತವಾದ ಅಂದಿನ ಕಾವ್ಯವು ಘೋಷಣೆ ಮಾತ್ರವಾಗದೆ ನೊಂದವರ, ಪ್ರತಿಭಟನೆಯ ಕೂಗಾಯಿತು. ಮನುಷ್ಯನನ್ನು ಮನುಷ್ಯನನ್ನಾಗಿಯೇ ನೋಡುವುದು, ಕವಿತೆ ಹೊಸ ಬದುಕನ್ನು ಬಯಸುವ ಪ್ರೇರಣೆಯಾಗಬೇಕು. ವ್ಯಂಗ್ಯ, ವಿಷಾದ, ವಿಡಂಬನೆ, ಅಸಹಾಯಕತೆಗಳ ಹಿಂದೆ

ಮಾನವೀಯ ತುಡಿತವಿರಬೇಕು ಕಾವ್ಯ ಅಥವಾ ಸಾಹಿತ್ಯದಲ್ಲಿ ಕವಿ ಮುಖ್ಯವಾಗಿ ಮಾನವತಾವಾದಿ”[15] ಎಂದು ಬರಗೂರು ರಾಮಚಂದ್ರಪ್ಪ ಬಂಡಾಯ ಚಳುವಳಿಯ ಆರಂಭದಲ್ಲಿಯೇ ಕರೆ ನೀಡಿದರು.

**ನನ್ನ ಜನ ದೊಡನೆ ನಾ ನಾಡಿದ ಮಾತು**
**ನಾನು ಕೊಡುವ ಕವನ**
**ನನ್ನ ಜನರ ನಾ ನೋಡಿದ ರೀತಿ**
**ನನ್ನ ಒಡಲ ಕವನ.**[16]

ಎನ್ನುತ್ತಾ ದಲಿತರ ನೋವಿಗೆ ದನಿಯಾದವರು ಡಾ. ಸಿದ್ದಲಿಂಗಯ್ಯನವರು. ‘ನನ್ನ ಕವನ ಕಥೆ ಹೇಳುವುದಿಲ್ಲ, ಬದುಕ ಹೇಳುತ್ತದೆ ಬದುಕಿನ ಮಿಡಿತ, ತುಡಿತ, ಸಿಡಿತಗಳ ಕ್ರೂರ ಹಿಡಿತಗಳ ಬಿಚ್ಚಿ ಹಿಡಿಯುತ್ತದೆ. ಹಾಗೆ ಬದುಕಿನ ತವಕ, ತಲ್ಲಣಗಳ ನೋವಿನ ಅಭಿವ್ಯಕ್ತಿಯೇ ಕವನ’ ಎಂದರು ಸಿದ್ಧಲಿಂಗಯ್ಯನವರು. ಮಂಕುತಿಮ್ಮನ ಕಗ್ಗದ ಮೂಲಕ ಜೀವನದ ಅನುಭವವನ್ನು ಲೋಕಾನುಭವದ ಸಾರವನ್ನು ಜೀವನಕ್ಕೆ ಬೆಳಗಾಗುವ ತತ್ವದ ಹಣತೆಗಳಂತೆ ಬೆಳಗಿದ ಡಿ. ವಿ. ಗುಂಡಪ್ಪನವರು ಕಾವ್ಯದ ಕಾರ್ಯವನ್ನು ಕುರಿತು ‘ಅದು ಉಪದೇಶವೆಂದಾಗಲಿ, ಬೋಧನೆ ಎಂದಾಗಲಿ ಕರೆಯುವುದಕ್ಕಿಂತ ಪ್ರೇರಣೆಯೆಂದು ಅದೂ ಸತ್ಪ್ರೇರಣೆ ಎಂದು ಕರೆಯುವುದು ಉಚಿತ’ ಎನ್ನುತ್ತಾರೆ. ಕಾವ್ಯವು ಸತ್ಪ್ರೇರಣೆ ನೀಡುವಂತಿರಬೇಕು.

ರಾಮಚಂದ್ರ ಶರ್ಮ ಅವರು ‘ಒಂದೊಂದು ಕವನವು ಭರವಸೆಯ ವ್ಯವಸಾಯ, ಅಜ್ಞಾತದ ಆಳಕ್ಕಿಳಿದು ಬಂದವನ ಭಾಗ್ಯ, ಕವಿಯು ಭುವನದ ಭಾಗ್ಯದಿಂದ ಜನಿಸುತ್ತಾನೆ’ ಎನ್ನುತ್ತಾರೆ. ಪರಂಪರೆಯ ಜ್ಞಾನದೊಂದಿಗೆ ವ್ಯಕ್ತಿತ್ವವೇ ಕಾವ್ಯವಾಗಬೇಕು, ಕಾವ್ಯವೇ ನಾವಾಗಬೇಕೆಂದು ವ್ಯಕ್ತಿತ್ವದ ಅಭಿವ್ಯಕ್ತಿಯೇ ಕಾವ್ಯವೆಂದವರು ಅರವಿಂದ ಮಾಲಗತ್ತಿಯವರು. ಸತ್ಯವನ್ನು ಶೋಧನೆ ಮಾಡಿ ಬರಿಯಬೇಕು ಕಾವ್ಯ ರಚನೆಗೆ ಅನುಭವವೇ ಕಾರಣ. ಹಸಿವು, ಅಸಮಾನತೆ, ಅಸ್ಪೃಶ್ಯತೆ, ನಾನು ಕಾವ್ಯರಚಿಸಲು ಕಾರಣವಾಯಿತೆಂದು ಕಾವ್ಯದ ಕಾರಣ ತಿಳಿಸಿರುವ ಮೂಡ್ನಾಕೂಡು ಚಿನ್ನಸ್ವಾಮಿಯವರು, ಕಾವ್ಯವೆಂದರೆ ನಾವು ಬದುಕಿದ ಬಗೆಯನ್ನು ಬಗೆಯುವ ಬಗೆ ಎನ್ನುತ್ತಾರೆ.

ಹೀಗೆ ಕನ್ನಡದಲ್ಲಿ ಕಾವ್ಯ ಕುರಿತು ಜಿಜ್ಞಾಸೆಯು ಶಬ್ದಾರ್ಥದಿಂದ ಆರಂಭವಾಗಿ ‘ಅರ್ಥವಿಲ್ಲ, ಸ್ವಾರ್ಥವಿಲ್ಲ ಬರಿಯ ಭಾವಗೀತ’ವೆಂದು ಸಾಗಿ, ಖಡ್ಗವಾಗಿ ನೊಂದವರ ದ್ವನಿಯಾಗಿ ಸತ್ಯಶೋಧನೆಯ ಮಾರ್ಗವಾಗಿ, ವ್ಯಕ್ತಿತ್ವದ ಅಭಿವ್ಯಕ್ತಿ, ಸಮಾಜದ ಕನ್ನಡಿಯೂ ಆಗಿ ಕಾಲದಿಂದ ಕಾಲಕ್ಕೆ ಕವಿತೆಯ ಜಿಜ್ಞಾಸೆ

ಬೆಳೆಯುತ್ತಲೇ ಕಾವ್ಯ ಕೃಷಿ ನಡೆಯುತ್ತಲೇ ಬಂದಿದೆ. ಈ ಜಿಜ್ಞಾಸೆಗಳಲ್ಲಿ ಕವಿಗೆ ಇರಬೇಕಾದ ಸಾಮಾಜಿಕ ಜವಾಬ್ದಾರಿ ಬದ್ಧತೆಯನ್ನು ತಿಳಿಸಲಾಗಿದೆ. ಕಾವ್ಯ ಆನಂದಾನುಭವ ನೀಡುವುದರ ಜೊತೆಗೆ ಅರಿವು, ಜ್ಞಾನವನ್ನು ನೀಡಿ ಬದುಕಿಗೆ ದಾರಿದೀಪವಾಗಬೇಕೆಂಬ ವಿಷಯಗಳಿವೆ. ಮಹತ್ ಆದುದ್ದನ್ನು, ಭವ್ಯವಾದುದ್ದನ್ನು ಕಾವ್ಯ ಚಿಂತಿಸುವಂತೆ ಮಾಡುತ್ತದೆ. ಮಾನವರೆದೆಯ ಹೊಲಗಳನ್ನು ಉತ್ತಿ ಬಿತ್ತಿ ಅಲ್ಲಿ ಅಂತಃಕರಣ, ಮಾನವ ಪ್ರೇಮ, ಕರುಣೆ, ಮೌಲ್ಯಗಳನ್ನು ಬೆಳೆಯುವಲ್ಲಿ ನೆರವಾಗುತ್ತದೆ.

**ಅಡಿ ಟಿಪ್ಪಣಿಗಳು:**

1. ಶ್ರೀಕಂಠಯ್ಯ ತೀ. ನಂ. (1990). ಭಾರತೀಯ ಕಾವ್ಯಮೀಮಾಂಸೆ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು.ಸಂ. 13.
2. ಶ್ರೀಕಂಠಯ್ಯ ತೀ. ನಂ. (1990). ಭಾರತೀಯ ಕಾವ್ಯಮೀಮಾಂಸೆ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು.ಸಂ. 5–6
3. ಶ್ರೀಕಂಠಯ್ಯ ತೀ. ನಂ. (1990). ಭಾರತೀಯ ಕಾವ್ಯಮೀಮಾಂಸೆ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು.ಸಂ. 6–7
4. ಶ್ರೀಕಂಠಯ್ಯ ತೀ. ನಂ. (1990). ಭಾರತೀಯ ಕಾವ್ಯಮೀಮಾಂಸೆ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು.ಸಂ. 24–25
5. ಶ್ರೀಕಂಠಯ್ಯ ತೀ. ನಂ. (1990). ಭಾರತೀಯ ಕಾವ್ಯಮೀಮಾಂಸೆ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು.ಸಂ. 14–15
6. ಪುಲಿಗೆರೆ ಸೋಮನಾಥ. (2020). ಸೋಮೇಶ್ವರ ಶತಕ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು.ಸಂ. 01
7. ಶಾಂತಲಕ್ಷ್ಮಿ. ಆಧುನಿಕ ಕನ್ನಡ ಕವಿಗಳ ಕಾವ್ಯ ಜಿಜ್ಞಾಸೆಗಳು. ಪ್ರಾಸ್ತಾವನೆ, ಪು.ಸಂ. 7
8. ಬೇಂದ್ರೆ. (1974) ಸಾಹಿತ್ಯದ ವಿರಾಟ್ ಸ್ವರೂಪ. ಸಮಾಜ ಪುಸ್ತಕಾಲಯ. ಧಾರವಾಡ. ಪು.ಸಂ. 183–184
9. ಕುವೆಂಪು. ಕೋಳಲು. ಪು.ಸಂ. 1–2
10. ನರಸಿಂಹಾಚಾರ್ ಪು. ತಿ. (2004) ಕಾವ್ಯಕುತೂಹಲ (ಸಮಗ್ರ ಕಾವ್ಯ). ಪು.ತಿ.ನ. ಟ್ರಸ್ಟ್. ಪು.ಸಂ. 1
11. ಗೋಪಾಲಕೃಷ್ಣ ಅಡಿಗ. (1987) ಅಡಿಗರ ಸಮಾಗ್ರ ಕಾವ್ಯ. ಐ.ಬಿ.ಹೆಚ್. ಪ್ರಕಾಶನ. ಬೆಂಗಳೂರು. ಪು.ಸಂ. 1

12. ನರಸಿಂಹಸ್ವಾಮಿ ಕೆ. ಎಸ್. (2017). ತೆರೆದ ಬಾಗಿಲು. ವಸಂತ ಪ್ರಕಾಶನ. ಪು.ಸಂ. 48
13. ಶಿವರುದ್ರಪ್ಪ ಜಿ. ಎಸ್. (2009). ಸಮಗ್ರಕಾವ್ಯ. ವಸಂತ ಪ್ರಕಾಶನ. ಪು.ಸಂ. 57
14. ಶಿವರುದ್ರಪ್ಪ ಜಿ. ಎಸ್. (2009). ಸಮಗ್ರಕಾವ್ಯ. ವಸಂತ ಪ್ರಕಾಶನ. ಪು.ಸಂ. 349
15. ಬರಗೂರು ರಾಮಚಂದ್ರಪ್ಪ. ಬಂಡಾಯ ಸಾಹಿತ್ಯ ಮೀಮಾಂಸೆ. ಪು.ಸಂ. 77–78
16. ಸಿದ್ದಲಿಂಗಯ್ಯ. ಬಂಡಾಯಕಾವ್ಯ. ಪು.ಸಂ. 372

## ಪರಮಾರ್ಶನ ಗ್ರಂಥಗಳು:


1. ಶ್ರೀಕಂಠಯ್ಯ ತೀ. ನಂ. (1990). ಭಾರತೀಯ ಕಾವ್ಯಮೀಮಾಂಸೆ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
2. ಶಿವರುದ್ರಪ್ಪ ಜಿ. ಎಸ್. (2002). ಕಾವ್ಯಾರ್ಥ ಚಿಂತನ. ಪ್ರಿಯದರ್ಶಿನಿ ಪ್ರಕಶನ. ಬೆಂಗಳೂರು.
3. ತಿಪ್ಪೇರುದ್ರಸ್ವಾಮಿ ಎಚ್. (1993). ತೌಲನಿಕ ಕಾವ್ಯಮೀಮಾಂಸೆ. ಡಿ.ವಿ.ಕೆ. ಮೂರ್ತಿ ಪ್ರಕಾಶನ. ಮೈಸೂರು.
4. ಬೇಂದ್ರೆ ದ. ರಾ. (ಸಂ) ವಾಮನ ಬೇಂದ್ರೆ. (1974) ಸಾಹಿತ್ಯ ವಿರಾಟ್ ಸ್ವರೂಪ. ಸಮಾಜ ಪುಸ್ತಕಾಲಯ. ಧಾರವಾಡ.
5. ಶಿವರುದ್ರಪ್ಪ ಜಿ. ಎಸ್. (2009) ಸಮಗ್ರ ಕಾವ್ಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ. ಬೆಂಗಳೂರು.
6. ಪು.ತಿ.ನ. (2004). ಸಮಗ್ರ ಕಾವ್ಯ. ಡಾ. ಪು.ತಿ.ನ. ಟ್ರಸ್ಟ್, ಬೆಂಗಳೂರು.
7. ಕುವೆಂಪು (2000) ಸಮಗ್ರ ಕಾವ್ಯ, ಸಂಪುಟ–1. ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
8. ಗೋಪಾಲಕೃಷ್ಣ ಅಡಿಗ ಎಂ. (1976) ಸಮಗ್ರ ಕಾವ್ಯ. ಸಾಕ್ಷಿ ಪ್ರಕಾಶನ. ಬೆಂಗಳೂರು.
9. ನರಸಿಂಹಸ್ವಾಮಿ ಕೆ. ಎಸ್. (1991). ಉಪವನ. ಕಾವ್ಯಾಲಯ. ಮೈಸೂರು.
10. ಸಿದ್ದಲಿಂಗಯ್ಯ. (1991) ಹೊಲೆಮಾದಿಗರ ಹಾಡು. ಜನಸ್ನೇಹ ಪ್ರಕಾಶನ. ಬೆಂಗಳೂರು.
11. ಬರಗೂರು ರಾಮಚಂದ್ರಪ್ಪ (ಸಂ). (1990). ಬಂಡಾಯ ಕಾವ್ಯ. ಕನ್ನಡ ಮತ್ತು ಸಂಸ್ಕೃತಿ ನಿರ್ದೇನಾಲಯ. ಬೆಂಗಳೂರು.
12. ಪುಲಿಗೆರೆ ಸೋಮನಾಥ. (2020). ಸೋಮೇಶ್ವರ ಶತಕ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.